**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 483/2025**

| | | | |
|---|---|---|---|
| ಹೆಸರು | | ಶ್ರೀ ಡಾ.ಬಸಪ್ಪ | ಚಾಸಾಃ 01 |
| ತಂದೆ ಹೆಸರು | | ಶ್ರೀ ವೀರತಪ್ಪ | ಫ್ರಾಸಾಃ 01 |
| ವಯಸ್ಸು | | 76 ವರ್ಷ | ಸಾಕ್ಷಿಯನ್ನು ದಿನಾಂಕಃ 20.12.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವೈದ್ಯರು | |
| ವಾಸ | | ಬೇಗೂರು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಅಸೆಸ್ಮೆಂಟ್ ಸಂಖ್ಯೆಃ 709 ಬೇಗೂರು ಗ್ರಾಮದಲ್ಲಿ 1977 ರಲ್ಲಿ ನಾನು ಸ್ವತ್ತನ್ನು ಖರೀದಿ ಮಾಡಿದೆ. ಅದರ ವಿಸ್ತೀರ್ಣ 4 ಗುಂಟೆ. ಅದನ್ನು ಅನ್ಯಕ್ರಾಂತ ಮಾಡಿಸಿದ್ದೆ. 2018 ರಲ್ಲಿ ಕಟ್ಟಡ ಕಟ್ಟಲು ಲೈಸೆನ್ಸ್ ಕೋರಿ ಅರ್ಜಿ ಸಲ್ಲಿಸಿದ್ದೆ. ಲೈಸೆನ್ಸ್ ಪಡೆದು ನಾನು ಕಟ್ಟಡ ಪ್ರಾರಂಭಿಸಿದೆ. ನನ್ನ ಸ್ವತ್ತಿನ ಮೇಲೆ ಆರೋಪಿಗಳು ದಾವೆ ಹೂಡಿದ್ದರು. ಅದು ವಜವಾಯಿತು. ಉಳಿದ ಕಟ್ಟಡವನ್ನು ಪೂರ್ಣಗೊಳಿಸಿದೆ. ದಿಃ 27.05.2025 ರಂದು ಆರೋಪಿಗಳು ಬಂದು ಚಾಸಾ–2 ರವರ ಜೊತೆ ಗಲಾಟೆ ಮಾಡಿದರು. ಮರು ದಿನ ನನಗೆ ವಿಷಯ ತಿಳಿಯಿತು. ಆರೋಪಿಗಳು ಅತೀಕ್ರಮ ಪ್ರವೇಶ ಮಾಡಿ ನನಗೆ ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಬೆದರಿಕೆ ಹಾಕಿದರು. ನಂತರ ದಿಃ 29.05.2025 ರಂದು ನಾನು ದೂರು ನೀಡಿರುತ್ತೇನೆ. ದಿಃ 31.05.2025 ರಂದು ಪೊಲೀಸರು ಮಹಜರ್ ಮಾಡಿದರು. ನಾನು ಸ್ಥಳ ತೋರಿಸಿರುತ್ತೇನೆ. ಆ ಕಾಲಕ್ಕೆ ಚಾಸಾ–3 ರವರು ಹಾಜರಿದ್ದರು ಮತ್ತು ಫೋಟೋ ತೆಗೆದರು.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು, ಅದನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರ್ತಿಸಲಾಯಿತು. ಫೋಟೋವನ್ನು ನಿಪಿ3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ 1, 2, 4 ಮತ್ತು 5

ರವರು ಗೈರು ಹಾಜರಿದ್ದು ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ. ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ನಿಪಿ2 ನ್ನು ಮದ್ಯಾಹ್ಹ 1.30 ರಿಂದ 2.30 ರವರೆಗೆ ಮಾಡಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ಚಾಸಾ–5 ಮತ್ತು 6 ರವರು ಹಾಜರಿದ್ದರು ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಓ.ಎಸ್.ಸಂಖ್ಯೆ: 145/2016 ರಲ್ಲಿ ಆರೋಪಿಗಳು ವಾದಿಗಳು ಎಂದರೆ ಸರಿ. 2016 ರಿಂದ ಸ್ವತ್ತಿನ ವಿಷಯವಾಗಿ ವಿಚಾರ ನಡೆಯುತ್ತಿತ್ತು ಎಂದರೆ ಸರಿ. ದಿಃ 17.03.2025 ರಂದು ದಾವೆ ತೀರ್ಮಾನವಾಯಿತು ಎಂದರೆ ಸರಿ. ಸದರಿ ದಾವೆಯಲ್ಲಿ ಸ್ವತ್ತಿಗೆ ಸಂಬಂಧಪಟ್ಟ ದಾಖಲೆ ಮತ್ತು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಆರೋಪಿಗಳ ಬಳಿ ದಾಖಲೆ ಇಲ್ಲಾ ಎಂದು ಸದರಿ ದಾವೆ ವಜವಾಗಿತ್ತು. ತನಿಖೆ ಕಾಲಕ್ಕೆ ಸದರಿ ದಾವೆಯ ತೀರ್ಪು ಮತ್ತು ಡಿಕ್ರಿಯನ್ನು ನೀಡಿದ್ದೇನೆ. ನನ್ನ ಸಾಕ್ಷ್ಯ ಭಾಗವನ್ನು ಪೊಲೀಸರಿಗೆ ನೀಡಿದ್ದೇನೆ. ಆರೋಪಿಗಳು ಸಲ್ಲಿಸಿದ್ದ ದಾವೆ ಕಾಲ ಪರಿಮಿತಿಯ ಕಾರಣಕ್ಕಾಗಿ ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗಳು ಆರ್.ಎ.ಸಂಖ್ಯೆ: 44/2025 ರಂತೆ ಅಪೀಲು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಮೇಲ್ಮನವಿ ವಿಚಾರಣಾ ಹಂತದಲ್ಲಿ ಇದೆ ಎಂದರೆ ಸರಿ.

ಓ.ಎಸ್.ಸಂಖ್ಯೆ: 145/2016 ರಲ್ಲಿ ನ್ಯಾಯಾಲಯದ ನಿಯೋಗಿ ಇಮ್ಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು ಎಂದರೆ ಸರಿ. ಸ್ವಾಧೀನದ ಆದಾರದ ಮೇಲೆ ನಿಯೋಗಿ ತನ್ನ ವರದಿ ಸಲ್ಲಿಸಿದ್ದರು ಎಂದರೆ ಸರಿ. ನ್ಯಾಯಾಲಯದ ನಿಯೋಗಿಯ ವರದಿಯ ಪ್ರತಿಯನ್ನು ಪೊಲೀಸರಿಗೆ

ನೀಡಿಲ್ಲ. ಓ.ಎಸ್.ಸಂಖ್ಯೆ: 145/2016 ರ ತೀರ್ಪಿನ ಪ್ರತಿ ಮತ್ತು ನನ್ನ ಹೇಳಿಕೆಯನ್ನಾಗಲಿ ಪೊಲೀಸರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಓ.ಎಸ್.ಸಂಖ್ಯೆ: 145/2016 ರಲ್ಲಿ ಸದರಿ ಸ್ವತ್ತು ನನ್ನದಲ್ಲ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಸದರಿ ದಾಖಲೆಗಳನ್ನು ಪೊಲೀಸರಿಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೊಲೀಸರು ಕೇಳಲಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಇಂದಿಗೂ ಆರೋಪಿಗಳೇ ಸ್ವಾಧೀನದಲ್ಲಿದ್ದು ಅದನ್ನು ಕಬಳಿಸುವ ಸಲುವಾಗಿ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಮೇಲೂ ದೂರು ದಾಖಲಿಸಲು ಠಾಣೆಗೆ ಹೋಗಿದ್ದರು ನನ್ನ ಅಧಿಕಾರ ಮತ್ತು ಹಣಬಲದಿಂದ ದೂರು ದಾಖಲಾಗದಂತೆ ನೋಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪ್ರಸ್ತುತ ಸ್ವತ್ತು ಮತ್ತು ನನ್ನ ಕ್ರಯ ಪತ್ರದ ಚೆಕ್ಕುಬಂಧಿ ಬೇರೆ ಬೇರೆ ಇವೆ ಎಂದರೆ ಸರಿಯಲ್ಲ. ನಿಪಿ2 ನ್ನು ಠಾಣೆಯಲ್ಲೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಯಾವುದೆ ಕೊಲೆ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಸ್ವತ್ತಿಗೆ ಅತೀಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಸೂಕ್ತ ದಾಖಲೆಗಳನ್ನು ಕೊಡದೆ ಪೊಲೀಸರ ಜೊತೆ ಸಾಮಿಲಾಗಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**